doc-516
T-P-2

Reg No M 1299 - 42nd Year - Sri 'Satyavadi' Mysore - 18-1-1958

ಎಲ್ಲ ವಿಧದ ಅಚ್ಚುಮೊದ ಔಷಧಗಳಿಗೆ
ಅ ಶೋ ೨ ಫಾ ರ್ಮ ಸಿ
ಅಶ್ವಾನ್ಸ್‌ಡೌ ಬಜಾರ್, ಮೈಸೂರ

For Quality Printing
L. N. Press
Sivarampet, Mysore

ಸತ್ಯವಾದಿ

ಸ್ಥಾಪಕರು- ಅರೆಮನೆ ಸಿಂಸ್ಕೇದಾರ್ ಎಂ. ವಿ ಸುಬ್ಬರಾಯರು [ಬಿಡಿಪ್ರತಿ 3 ಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಒದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ
ಸತ್ಯವಾದಿ ವಾರಾಂತ್ಯ ಪತ್ರಿಕೆ
ವಾರ್ಷಿಕಚಂದಾ ಅಂಚೆವೆಚ್ಚಸೇರಿ 1-80

ಪ್ರಾಗ್ಜ್ಯೋತಿಪುರದಲ್ಲಿ ಕಾರ್ಮಿಕರ ಭಾರೀ ಮೆರವಣಿಗೆ

ಮಂತ್ರಿಗಳ ವೇತನ ಹೆಚ್ಚಕೂಡದೆಂದು ಆಸ್ಸಾಂ

ಮಂತ್ರಿಗಳಿಗೆ ಮತ್ತು ಪಾರ್ಲಿಮೆಂಟಿನ ಸದಸ್ಯರಿಗೆ ವೇತನ ಹೆಚ್ಚಿಸುವ ಯೋಜನೆಯನ್ನು ಜವಾಹರಿನ ಪ್ರಧಾನಿ ನೋಟುಸ್ಕೆ ಕಿಷಿಯವರು ಗುರುವಾರ ನಿಂದಿಸಿ ಯೋಜನೆಯನ್ನು ಹಿಂದೆಸೆಯಲು ಆರ್ಥಿಕ ಮಂತ್ರಿಯವರಿಗೆ ಆಜ್ಞೆ ಮಾಡಿರುವರು

ಪತ್ರ ಪ್ರಕಟಣೆ

ಶ್ರೀನಗರ 17 — ಕಾಶ್ಮೀರ ಪ್ರಜಾ ಪ್ರಭುತ್ವ ರಾಷ್ಟ್ರೀಯ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಸಾದಿಕ್‌ಅಲಿಯವರು ಶ್ರೀ ಷೇಕ್ ಅಬ್ದುಲ್ಲರವರು ಸ್ಥಾನಬದ್ಧತೆಯಲ್ಲಿದ್ದಾಗ ಬರೆದ ಪತ್ರಗಳನ್ನು ಒಂದೆರಡು ದಿನಗಳಲ್ಲಿ ಪ್ರಕಟಿಸುವರು.

ಹೊಸ ಮೇಯರ್

ಬೆಂಗಳೂರು 17 — ಬೆಂಗಳೂರಿನ 36 ವರ್ಷದ ಅಡ್ವೊಕೇಟರಾದ ಶ್ರೀ ಮೈ ರಾಮಚಂದ್ರರವರು ಕಾಂಗ್ರೆಸು ಉಮೇದುವಾರರಾಗಿ ಮೇಯರರಾಗಿ ಆಯ್ಕೆ ಆದರು ಅಡ್ವೊಕೇಟರಾದ ಶ್ರೀಮತಿ ಸಿ. ಶಾರದಾರವರು ಕಾಂಗ್ರೆಸು ಪಂ ಸ್ಪರ್ಧಿಸಿದ್ದು ಉಪ ಮೇಯರರಾಗಿ ಆಯ್ಕೆ ಆದರು

ರಾಜರ ಆಗಮನ

ಫೆಬ್ರವರಿ 11 ರಂದು ಅಫ್ಘಾನಿಸ್ತಾನ್ ದೊರೆ ಜಾಹೀರ್ ಷಾರವರು ಭಾರತಕ್ಕೆ ಅಧಿಕೃತ ಭೇಟಿ ಕೊಡುವ ನಿರೀಕ್ಷೆ ಇದೆ

ಕನ್ನಡಿಗರೆಂದರೂ ಒಂದೇ; ಪರಿಷತ್ ಸದಸ್ಯರು ಎಂದರೂ ಒಂದೇ

ಬಳ್ಳಾರಿ 18 — ಇಂದು ಕನ್ನಡ ಸಾಹಿತ್ಯ ಪರಿಷತ್ತು ಮಾಡಬೇಕಾದ ಇನ್ನೊಂದು ಅವಶ್ಯಕ ಕಾರ್ಯವಿದೆ; ರಾಜಕೀಯವಾಗಿ ಒಂದಾದ ಜನ ವಿಶ್ವಾಸದಲ್ಲಿಯೂ ಸಮಿಕೆಳೆ ಅತ್ಮೀಯತೆಗಳಲ್ಲಿಯೂ ಇನ್ನಷ್ಟು ಹಾರ್ದಿಕವಾಗಿ ಬೆಸೆಯುವಂತೆ ಈವರೆಗೆ ಮಾಡುತ್ತಿದ್ದ ಕೆಲಸವನ್ನು ಇನ್ನಷ್ಟು ವಿಶೇಷವಾಗಿ ಮಾಡಿದರೆ, ಈ ಜನತೆಯ ಮೇಲ್ಮೈಗಾಗಿ ಅತಿಶಯವಾಗಿ ಶ್ರಮಿಸಿದ ಫಲ ಬರುತ್ತದೆ. ಹಾಗೆಯೇ ಈ ಜನ ಒಂದು ಅಧುನಿಕ ಸತ್ಕವಾಗಲು ಸಮಸ್ತ ಸಿದ್ಧತೆಯನ್ನು ಪಡೆಯವಂತೆ ಕನ್ನಡದಲ್ಲಿ ವಿದ್ಯೆ, ಶಿಕ್ಷಣ, ನಿರಂತರ ಅಭ್ಯಾಸ, ಸಾರಸ್ವತ ಸಂಪತ್ತು ಬೆಳೆಯುವಂತೆ ಮಾಡಬೇಕು. ಕನ್ನಡವಲ್ಲದ ಬೇರೆ ಯಾವ ಭಾಷೆಗಳಿ ಹಾಗದಂತೆ, ಅದರ ಕೈ ಕಾರ್ಯವಂತೆ ಕನ್ನಡದ ಶ್ರೀಮಂತಿಕೆ ರಂಜಿತವಾದಲ್ಲದೆ ಇದು ಸಾಧ್ಯವಾಗದು; ಇಲ್ಲವಾದರೆ ಎಂದಿಗೂ ಇತರರಂ ಬಂಟರೊ, ವಾಹನಗಳೊ, ಪ್ರತಿಧ್ವನಿಗಳೊ, ನೆಳಲುಗಳೊ ಆಗಿ ನಡೆಯಬೇಕಾದೀತು. ಒಂದು ವಿದ್ಯಾಶಂಕ್ರವೇ ನಿರ್ಮಾಣವಾದ ಹೊತ್ತು ಇದು ಸಾಧ್ಯವಾಗಬಹುದು. ಇಲ್ಲದಿದ್ದರೆ ಹೊರಸಾಧನಸಂಪತ್ತು ಎನಿದ್ದರೇನು ? ಹೇಗಿದ್ದರೇನು ? ಇದಕ್ಕೆ ಕನ್ನಡ ಜನತೆಯೂ ಪರಿಷತ್ತಿನ ಸದಸ್ಯರೂ ನಿರಂತರವಾಗಿ ಗಮನಕೊಡಬೇಕು. ನನ್ನೆಣಿಕೆಯಲ್ಲಿ ಕನ್ನಡಿಗರೆಂದರೂ ಒಂದೇ ಪರಿಷತ್ ಸದಸ್ಯರು ಎಂದರೂ ಒಂದೇ ಎಂದು 40 ನೇ ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸುತ್ತಾ ಮೈಸೂರು ರಾಜ್ಯಪಾಲರು ತಿಳಿಸಿದರು.

ಪ್ರಾಗ್ಜ್ಯೋತಿಪುರ 17 — 10000 ಕಾರ್ಮಿಕರು ಮತ್ತು ರೈತರಿಗೆ ಮೇಲ್ಪಟ್ಟು ಜನರು ಇಲ್ಲಿ ಮೆರವಣಿಗೆಯಾಗಿ ಬಂದ ವಾಳಪಾಹಿ ನಾಶವಾಗಲಿ, ಜಮೀನ್ದಾರಿ ಪದ್ಧತಿ ನಾಶವಾಗಲಿ, ಉಳುವವನಿಗೆ ಭೂಮಿ, ರಾಜಬಂದಿಗಳ ಬಿಡುಗಡೆ ಆಗಲಿ ಎಂದು ಘೋಷಣೆಗಳನ್ನು ಕೂಗಿದರು ಮೆರವಣಿಗೆಯಲ್ಲಿ ಕೆಲವು ಮಹಿಳೆಯರು ಇದ್ದರು. ಅಸ್ಸಾಂನಲ್ಲಿನ ಕ್ರಾಂತಿಕಾರಿ ಕಮ್ಯುನಿಸ್ಟ್ ಪಕ್ಷ ಈ ಮೆರವಣಿಗೆ ಏರ್ಪಾಟು ಮಾಡಿದ್ದಿತು. ಮೆರವಣಿಗೆ ಕಾಂಗ್ರೆಸು ಜಪ್ಪಂದ ಕೆಲವು ಗಜಗಳ ದೂರದಲ್ಲಿ ನಿಂತಿತು.

ಪ್ರಾಗ್ಜ್ಯೋತಿಪುರ 17 — ಭಾರತೀಯ ಭಾಷೆಯೊಂದು ಮಾತ್ರವೇ ರಾಷ್ಟ್ರೀಯ ಕೊಂಡಿಯೊಂದನ್ನು ಒದಗಿಸುವುದೆಂದು ಭಾಷೆ ನಿರ್ಣಯದಲ್ಲಿ ಅಳವಡಿಸಲಾಗಿದೆ.

ಪ್ರಾಗ್ಜ್ಯೋತಿಪುರ 17 — ಆರ್ಥಿಕ ಪರಿಸ್ಥಿತಿಯ ನಿರ್ಣಯವನ್ನು ಕಾಂಗ್ರೆಸು ಅಧಿವೇಶನದಲ್ಲಿ ಪಂ॥ ನೆಹರು ಮಂಡಿಸುತ್ತಾ, ಏನೇ ಬರಲಿ, ಯೋಜನೆ ಕಾರ್ಯಗತ ಮಾಡುತ್ತೇವೆ ಎಂಬ ಸ್ಪಷ್ಟ ತೀರ್ಮಾನದಿಂದ ಎಳೆಡನೆ ಯೋಜನೆ ಸವಾಲು ತೆಗೆದುಕೊಳ್ಳಬೇಕೆಂದು ಪ್ರತಿಯೊಬ್ಬ ಭಾರತೀಯನಿಗೂ ಕರೆಯಿತ್ತರು

ಬೆಂಗಳೂರು 17 — ಅಖಿಲ ಭಾರತ ಕಾಂಗ್ರೆಸು ಅಧಿವೇಶನವನ್ನು ಮುಗಿಸಿಕೊಂಡು ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಈ ತಿಂಗಳು 20 ನೇ ತಾ॥ ಇಲ್ಲಿಗೆ ಆಗಮಿಸುವರು

ನಾಳೆಯ ಪಂಚಾಂಗ

ಆ॥ ಮಹಾವಿದ್ವಾ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ
19 ಅಮಾವಾಸ್ಯೆ ಪೂರ್ವಾಷಾಢ

ಸುದ್ದಿಗಳು

ಮಧ್ಯ ಪ್ರದೇಶದ ಜುನಾ ಜಿಲ್ಲೆಯ ಜುನಾ ಗ್ರಾಮದಲ್ಲಿ ಶ್ರೀ ಬಾಬ.'ಎಂಬ ಧೈರ್ಯಶಾಲಿನಿಯಾದ ಸಣ್ಣ ವಯಸ್ಸಿನ ಮಹಿಳೆ ಏಕಮಾತ್ರಳಾಗಿ ಮೂರು ಜನ ಕುಪ್ರಸಿದ್ಧ ಧೃಕರಾಯಿ ತಲೊಡನೆ ಹೋರಾಡಿ ಅವರು ಪದಾರ್ಥಗಳನ್ನು ತೆಗೆದು ಕೊಂಡುಹೋಗದಂತೆ ತಡೆದಳು ಚಾಕು ಗಾಯಗಳಿಗೂ ಅಕೆ ಹೆದರಲಿಲ್ಲ ಧೃಕರಾಯಿ ತಂಡದ ಪೈಕಿ ಒರ್ವ ಕಾರಾಗೃಹದಲ್ಲಿ ಇದ್ದಾನೆ.

ಪ್ರಾಗ್ಜ್ಯೋತಿಪುರ 17 — ಘಟನೆಯ 343 (3) ವಿಧಿಯಲ್ಲಿ ಅವಕಾಶವಾಗಿರುವಂತೆ 1965 ನೆಯ ವರ್ಷ ಆದನಂತರವೂ ಇಂಗ್ಲೀಷು ಉಪಯೋಗಿಸಲು ಅವಕಾಶ ಮಾಡಿಕೊಡಬೇಕೆಂದು ವಿಷಯನಿಯಾಮಕ ಸಮಿತಿ ನಿರ್ಣಯವನ್ನು ತಿದ್ದುಪಡಿಮಾಡಿ ಅಂಗೀಕರಿಸಲಾಗಿದೆ.

ಮೈಸೂರು 17 — ಅಖಿಲ ಭಾರತ ಪ್ರಜಾ ಸೋಷಲಿಸ್ಟ್ ಪಕ್ಷದ ಜಂಟಿ ಕಾರ್ಯದರ್ಶಿ ಶ್ರೀ ಫರೀದ್ ಅನ್ಸಾರಿ ಈ ಮಧ್ಯಾಹ್ನ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ, ಕೇರಳದಲ್ಲಿ ತೀವ್ರ ಅರಾಜಕತೆ ಇದೆ ಎಂದರು.

ಈ ತಿಂಗಳು 26 ನೇ ತಾ॥ ಗಣರಾಜ್ಯ ದಿನೋತ್ಸವದಂದು ಸಮುದ್ರದಾಚೆ ಸೇವೆ ಮಾಡುತ್ತಿರುವ ಭಾರತ ಸೇನೆಗಳು ಒಂದು ಪೊಟ್ಟಣ ಸಿಹಿ ಮತ್ತು ಹಣ್ಣುಗಳನ್ನು ಪಡೆಯುವುವು.

ಕರಾಚಿ 17 — ಷೇಕ್ ಅಬ್ದುಲ್ಲರನ್ನು ಭೇಟಿ ಮಾಡುವದಿಲ್ಲವೆಂದು ವಿಶ್ವಸಂಸ್ಥೆಯ ಕಾಶ್ಮೀರ ಮಧ್ಯಸ್ಥಿಕೆಗಾರ ಡಾ॥ ಫ್ರಾಂಕ್ ಗ್ರಹಾಂ ತಿಳಿಸಿದ್ದಾರೆ.

ಬೆಂಗಳೂರು 17 — ಇಂಡಿಯನ್ ಕಾಫಿ ಬೋರ್ಡಿನ ವಜ ಮಾಡಲ್ಪಟ್ಟ ತೆಲಸಗಾರರು " ಕಾಫಿ ಹೌಸ್ " ಆರಂಭಿಸಿರುವರು.

ತನ್ನನ್ನು ಹೊಂದಿದ್ದವರಿಗೆಲ್ಲಾ ದುರ್ದೆಶೆ ತಂದ ಭಾರತದ ವಜ್ರದ ಕಥೆ

(ನಿನ್ನೇ ಸಂಚಿಕೆಯಿಂದ ಮುಂದಕ್ಕೆ)

ಅವನಿಗೆ ಒಂದು ರೀತಿ ಹುಚ್ಚೇ ಹಿಡಿಯಿತು, ಆ ವಜ್ರವನ್ನು ಪಡೆಯಲೇ ಬೇಕೆಂದು ನಿರ್ಧರಿಸಿದರು; ಆದರೆ ಅದು ಹೇಗೆ ಎಂಬ ಯೋಚನೆ ಆವರಿಸಿತು! ತನ್ನ ಪತ್ನಿಯೊಂದಿಗೆ ಪರ್ಯಾಲೋಚಿಸಿದನು; ಮನಸ್ಸಾದರೆ ಮಾರ್ಗವಿದೆ ಎಂದು ಅವನ ಪತ್ನಿ ಸೂಚಿಸಿದಳು.

ಕೆಲವು ದಿವಸಗಳಲ್ಲಿ ಆ ಇಂಗ್ಲೀಷರವನು ಥಟ್ಟನೆ ಐಶ್ವರ್ಯವಂತನಾದನು; ಆ ವಜ್ರವನ್ನು 20400 ಪೌಂಡು (ಸುಮಾರು ರೂ 3 ಲಕ್ಷ)ಗಳಿಗೆ ಕೊಂಡು ಕೊಂಡನು! ಆ ಭಾರಿ ರತ್ನವನ್ನು ಅವನು ಕೊಂಡಿದ್ದರ ಮಾತೇ ಎಲ್ಲಾ ಕಡೆ ಎದ್ದಿತು; ಇಷ್ಟು ಹಣ ಅವನಿಗೆ ಎಲ್ಲಿ ಬಂತು? ಈ ಮಾತು ಲಂಡನ್ನಿನ ಕಂಪೆನಿ ಡೈರೆಕ್ಟರ್ರುಗಳ ಕಿವಿಗೆ ಬಿದ್ದು, ಈ ಇಂಗ್ಲೀಷರವನನ್ನು ವಾಪಸ್ಸು ಕರೆಸಿದರು.

ಇವನು ಇಂಗ್ಲೆಂಡಿಗೆ ತಲಪಿದ ನಂತರ ಪತ್ನಿ ವಿಯೋಗವಾಯಿತು; ಈ ಅವಿಶ್ಯಕ ವಜ್ರವನ್ನೆ ಅನಸಲ್ಲಿದ್ದಿತು; ಅದನ್ನು ಮಾರುವುದಕ್ಕಾಗಿ ಫ್ರಿಟ್ಜೇ ಇಲ್ಲೀ ಅಲೆದಾಡಿದನು: ಆದರೆ ಊಹೆಗೆ ನಿಲುಕದ ಬೆಲೆಯ ಈ ರತ್ನವನ್ನು ಕೊಳ್ಳುವವರ್ಯಾರು?

ಈ ಸಮಯಕ್ಕೆ ಸರಿಯಾಗಿ ಡ್ಯೂಕ್ ಆಲ್ಬರ್ನ್ಸನು ಫ್ರೆಂಚ್ ರಾಜನಿಗೆ ಒಂದು ಅಡಂಬರವಾದ ಕಿರೀಟವನ್ನು ತಯಾರಿಸಲು ಯೋಚಿಸುತ್ತಿದ್ದುದು ಇವನಿಗೆ ತಿಳಿಯಿತು: ಸ್ವಲ್ಪ ಚೌಕಾಸಿನಂತರ, ಡ್ಯೂಕನು ಆ ವಜ್ರವನ್ನು 13500೦ ಪೌಂಡುಗಳಿಗೆ (ಸುಮಾರು ರೂ 19 ಲಕ್ಷ) ಕೊಳ್ಳಲು ಒಪ್ಪಿದನು.

ಆದರೆ, ಮತ್ತೊಂದು ತಾಪತ್ರಯ ಒದಗಿತು; ಈ ಅಗಾಧ ಹಣ ವು ಫ್ರೆಂಚು ಸಂಕಾಂದಲ್ಲಿದ್ದ ಎಲ್ಲಾ ಹಣ ಮತ್ತು ಆಭರಣಗಳೂ ಸರಿದೂಗದಿದ್ದಿತು; ಆದಕ್ಕಾಗಿ ಈ ಹಣವನ್ನು ಅರು ಕಂತಿನಲ್ಲಿ ವಾರ್ಷಿಕವಾಗುವಂತೆ ಉಭಯತ್ರಂಲ್ಲಿ ಒಪ್ಪಂದವಾಯಿತು. ದುರ್ದೈವವಶಾತ್ ಈ ಎಲ್ಲಾ ಬಾಕಿ ವಸೂಲಾಗುವುದಕ್ಕೆ ಮುಂಚಿತವಾಗಿಯೇ ವಜ್ರ ಮಾರಿದವನು ತೀರಿಹೋದನು.

ಡ್ಯೂಕ್ ಆಫ್ ಆರ್ಲಿನ್ಸ್ ಈ ವಜ್ರಕ್ಕೆ 'ರೀಜೆಂಟ್' ಎಂದು ಹೆಸರಿಟ್ಟನು; ಅದಕ್ಕೆ ಸಾಣೆ ಹಿಡಿಸಿ ಮತ್ತೂ ಪ್ರಕಾಶವಾಗಿ ಕಾಣುವಂತೆ ಮಾಡಿದನು; ಸಾಣೆ ಹಿಡಿದನಂತರ ಅದು 136 ಕ್ಯಾರೆಟ್ಟುಗಳಿಗೆ ಸ್ವಲ್ಪ ಹೆಚ್ಚು ತೂಕವುಳ್ಳದ್ದಾಯಿತು.

18 ನೇ ಶತಮಾನಕ್ಕೆ ಮುಂಚೆ ಫ್ರೆಂಚು ರಾಜಮನೆತನಕ್ಕೆ ದುರ್ದೆಶೆ ಒದಗಿತು; ಫ್ರೆಂಚು ಕ್ರಾಂತಿಯ ನಾಯಕರು ಅಧಿಕಾರವನ್ನು ಕಸಿದುಕೊಂಡರು; ಈ ವಜ್ರವು ಅವರ ಕೈ ಸೇರಿತು; ಕ್ರಾಂತಿ ಕಾಲದಲ್ಲಿ ಇದು ಒಂದು ಸಾಧಾರಣ ಕಲ್ಲುವಾಗಿದ್ದುದು ಮತ್ತೆ ಸಿಕ್ಕಿತು.

ನೆಪೋಲಿಯನ್ನನು ಅದನ್ನು ಪಡೆದು, ತನ್ನ ಕಿರೀಟಧಾರಣಾ ಮಹೋತ್ಸವ ಕಾಲದಲ್ಲಿ ಹೊಂದಿದ್ದ ಕತ್ತಿಯ ಹಿಡಿಗೆ ಈ ವಜ್ರವನ್ನು ಹಾಕಿಸಿದನು; ನೆಪೋಲಿಯನ್ನನು ಖೈದಿಯಾಗಿ ಸೆಂಟಲೀನಾಕ್ಕೆ ಸಾಗಿಸಲ್ಪಟ್ಟಾಗ, ಈ ವಜ್ರವು ಪುನಃ ಫ್ರೆಂಚ್ ರಾಜಮನೆತನದ ವಶವಾಯಿತು.

ಆದರೆ ಫ್ರಾನ್ಸಿನಲ್ಲಿ ರಾಜತ್ವವು ಬಹು ಕಾಲವಿರಲಿಲ್ಲ: ಕಾಲಾನಂತರ ರಾಜಮನೆತನದ ವ್ಯಕ್ತಿಗಳು, ಅದಿಂಲ್ಲಿ ದೊರೆತ ರಾಶಿ ಆಭರಣಗಳು ಮಾಂಲ್ಪಟ್ಟವು: ಆದರೆ ಈ ರೀಜೆಂಟು ವಜ್ರವನ್ನು ಕೊಂಡುಕೊಳ್ಳಲು ಯಾರು ಬರಲಿಲ್ಲ.

ಈ ವಜ್ರವು ಅದನ್ನು ಪಡೆದವನಿಗೆ ವಿಪತ್ತು ತರುವುದೆಂದು ನಂಬಲ್ಪಟ್ಟಿತು: ಈ ಅಮೂಲ್ಯ ಆಭರಣವು ಕಡೆಗೆ ಫ್ರಾನ್ಸಿನ ಖಜಾನೆಯ ಅಪೋಲೋ ಗ್ಯಾಲರಿಯಲ್ಲಿಡಲ್ಪಟ್ಟಿತು.

ಮುನಿಸಿಪಲ್ ಕಮೀಷನರ ಆಫೀಸು
ಸಿಟಿ ಮುನಿಸಿಪಾಲಿಟಿ, ಮೈಸೂರು

ತಾ || 11-1-1958

R8. S. 40-53 / 57-58

ನೋಟಿಫಿಕೇಷನ್

ಮೈಸೂರು ಸಿಟಿ ವಾಣಿವಿಲಾಸ ಮಾರ್ಕೆಟ್ಟಿನಲ್ಲಿರುವ 16 ನೇ ನಂಬರು ಮಳಿಗೆಯನ್ನು — ಮುನಿಸಿಪಾಲಿಟಿಯಿಂದ ಸುಫರ್ದು ಪಡೆದಿರುವುದಾಗಿಯೂ, ಮಾಹೆಯಾನಾ ಬಾಡಿಗೆಗೆ ಪಡೆಯುವ ಹಕ್ಕು 1958 ನೇ ಮಾರ್ಚಿ ಅಖೈರ್‌ವರೆಗೆ ಮಾತ್ರ— 1958 ನೇ ಇಸ್ವಿ ಜನವರಿ ಮಾಹೆ 22 ನೇ ತಾರೀಖು ಹರಾಜು ಇಸ್ತಿಹಾರ್ ಪತ್ರುಗಳಿಗೆ ಒಳಪಡಿಸಿ ದಿವಾ 10-30 ಘಂಟೆ ಅಂಗಾಯಿ, ಸ್ಥಳದ ಒಳಿ ಬಹಿರಂಗವಾಗಿ ಹರಾಜು ಮಾಡಲಾಗುತ್ತೆ. ಇಷ್ಟವುಳ್ಳವರು ಸಕಾಲಕ್ಕೆ ಹಾಜರಾಗಿ ಛಡಸವಾಲು ಮೂಲಕ ಪಡೆಯಬಹುದು. ವಿವರಗಳನ್ನು ಆಫೀಸು ವೇಳೆಯಲ್ಲಿ ತಿಳಿಯಬಹುದು.

M. Narasimhiah
For Municipal Commissioner

Protect the cow
ಗೋ ಸಂರಕ್ಷಣೆ ಮಾಡಿ

ವುಡ್‌ಲ್ಯಾಂಡ್

ಜನಪ್ರಿಯ 2 ನೇ ವಾರ

ದೇವಾನಂದ್ — ಕಲ್ಪನಾ ಕಾರ್ತಿಕ್
ಶಶಿಕಲಾ ಪಾತ್ರವಹಿಸಿರುವ

ನಾ ದೊ ಗ್ಯಾರ

Nau Do Gyara

ಅತ್ಯಮೋಘ ಹಿಂದಿ ಚಿತ್ರ

ದಿನವಹಿ 3 ಪ್ರದರ್ಶನಗಳು

ಉಮಾ ಟಾಕೀಸ್

19—1—58 ರಿಂದ

ಕೋಟೀಶ್ವರನ್

(ತಮಿಳು)

ಪಾತ್ರ— ಶಿವಾಜಿ ಗಣೇಶ್, ಪದ್ಮಿನಿ ರಾಗಿಣಿ, ತಂಗವೇಲು, ಶ್ರೀ ರಾಂ ಬೇಬಿ ರಾಜಕುಮಾರಿ

[ಪ್ರತಿದಿನ 3 ಆಟಗಳು]

ಪ್ರತಿ ಶುಕ್ರವಾರ, ಶನಿವಾರ, ಭಾನುವಾರ ಬೆಳಿಗಿನ ಪ್ರದರ್ಶನ 10—30 ಕ್ಕೆ

ಅಪೆರಾ—

ಯಶಸ್ವಿ 5 ನೇ ವಾರ

ಮಾಯಾಬಜಾರ್

ಎಸ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಚೀಲಂಗಿ ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

SHAKTI SUDHA

A Superb Tonic

Edited, Printed& Published by Dharma Prachara Nirata M S Krishna Rao, at the Satyavadi Press Chamarajapura Mysore